ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್. ಸಿ., ನ್ಯಾಯಾಲಯ, ಗುಬ್ಬಿ

# ಸಿ.ಸಿ.ಸಂ.286/2020

**ದಿನಾಂಕಃ 12-06-2024**

ಫಿರ್ಯಾದಿಃ ಸರ್ಕಾರದ ಪರವಾಗಿ ಗುಬ್ಬಿ ಪೋಲೀಸ್

-ವಿರುದ್ಧ-

ಆರೋಪಿಗಳು: 1.ಜಯಣ್ಣ ಬಿನ್ .ಸಿದ್ದರಾಮಯ್ಯ
ವಯಸ್ಸು ಸುಮಾರು 57 ವರ್ಷ,

2.ಗಂಗಾದೇವಿ ಬಿನ್.ಜಯಣ್ಣ,
ವಯಸ್ಸು ಸುಮಾರು 53 ವರ್ಷ,

ಎಲ್ಲರೂ ವಾಸಃ ಕಲ್ಲೂರು ಕ್ರಾಸ್,
ಗುಬ್ಬಿ ತಾಲೂಕು, ತುಮಕೂರು.

ಶ್ರೀಮತಿ ಅನುಪಮ ಡಿ.,ಬಿ.ಕಾಂ.,ಎಲ್ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಗುಬ್ಬಿ ಆದ ನಾನು ಈ ಮೂಲಕ ನಿಮ್ಮ ಮೇಲೆ ಆರೋಪಿಸುವುದೇನೆಂದರೆಃ

ದಿಃ 21-05-2020 ರಂದು ಮಧ್ಯಾಹ್ನ 1-00 ಗಂಟೆ ಸಮಯದಲ್ಲಿ ಗುಬ್ಬಿ ತಾಲ್ಲೂಕು ಕಡಬಾ ಹೋಬಳಿ, ಕಲ್ಲೂರು ಕ್ರಾಸ್ ನ ಸಾಕ್ಷಿ-1 ನಾಗರಾಜು ಟಿ.ಎನ್. ರವರ ಬಾಬ್ತು ಸರ್ವೆ ನಂ.70/3 ರಲ್ಲಿ ಸಾಕ್ಷಿ-1 ರವರ ಮನೆಯ ಹಿಂಭಾಗದ ಪೂರ್ವದ ಕಡೆ 1 ನೇ ಆರೋಪಿಯಾದ ನೀವು ಮನೆಯನ್ನು ಕಟ್ಟುತ್ತಿದ್ದು ಮನೆಯ ಸಜ್ಜೆಯನ್ನು ಸಾಕ್ಷಿ-1 ರವರ ಮನೆಯ ಸೈಟಿಗೆ ಕಟ್ಟುತ್ತಿದ್ದ ಕಾರಣ ಸಾಕ್ಷಿ-1 ರವರು ಹೋಗಿ ಏಕೆ ನಮ್ಮ ಸೈಟಿನಲ್ಲಿ ಕಟ್ಟುತ್ತಿದ್ದೀಯಾ ಎಂದು ಕೇಳಿದ್ದಕ್ಕೆ ಆರೋಪಿಗಳಾದ ನೀವುಗಳು ಸೇರಿಕೊಂಡು ಸಮಾನ ಉದ್ದೇಶದಿಂದ ಬೋಳಿಮಗನೇ ಸೂಳೆ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು ಈ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರೆಂದು ಆರೋಪಿಸುತ್ತಿದ್ದೇನೆ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ತಲ್ಲೇ ಬಿದ್ದಿದ್ದ ದೊಣ್ಣೆಯನ್ನು ತೆಗೆದುಕೊಂಡು ಏಕಾಏಕಿ ಸಾಕ್ಷಿ-1 ರವರ ತಲೆ ಬುರುಡೆಗೆ ಹೊಡೆದಿದ್ದು, ಸಾಕ್ಷಿ-2 ರವರು ಕೇಳಲು ಹೋದಾಗ 1 ನೇ ಆರೋಪಿಯಾದ ನೀವು ಅಲ್ಲೇ ಬಿದ್ದಿದ್ದ ಒಂದು ಕಲ್ಲನ್ನು ತೆಗೆದುಕೊಂಡು ಸಾಕ್ಷಿ-2 ರವರ ಬಲಗಾಲಿಗೆ ಎತ್ತಿ ಹಾಕಿ ಸಾಮಾನ್ಯ ಸ್ವರೂಪದ ಗಾಯ ಉಂಟು ಮಾಡಿದ್ದು ಈ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ.324 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರೆಂದು ಆರೋಪಿಸುತ್ತಿದ್ದೇನೆ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿಗಳಾದ ನೀವು ಸಾಕ್ಷಿ **1** ರವರಿಗೆ ಕೈಯಿಂದ ಹೊಡೆದು ಕಾಲುಗಳಿಂದ ಒದ್ದು ನೋವುಂಟು ಮಾಡಿದ್ದು, ಈ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ.324 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರೆಂದು ಆರೋಪಿಸುತ್ತಿದ್ದೇನೆ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿಗಳಾದ ನೀವು ಸಾಕ್ಷಿ **1** ಮತ್ತು **2** ರವರನ್ನು ಕುರಿತು ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ, ಇವತ್ತು ಬದುಕಿದ್ದೀರಾ ನಿಮ್ಮನ್ನು ಸಾಯಿಸದೇ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿದ್ದು, ಈ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರೆಂದು ಆರೋಪಿಸುತ್ತಿದ್ದೇನೆ.

ಮೇಲಿನ ಆಪಾದನೆಯನ್ನು ನೀವು ನನ್ನ ಸಂಜ್ಞಾನದಲ್ಲಿ ಮಾಡಿದ್ದು, ಅದರಿಂದಾಗಿ ನನ್ನ ಸಮಕ್ಷಮ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತಿದ್ದೇನೆ

ಪ್ರಶ್ನೆಃ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರಃ

ಪ್ರಶ್ನೆಃ ನೀವು ಮೇಲಿನ ಆರೋಪಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆ?

ಉತ್ತರಃ

(ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ, ಈ ಮೇಲಿನಂತೆ ಆರೋಪಿಯನ್ನು ಪ್ರಶ್ನಿಸಿ ಅವರು ಕೊಟ್ಟ ಉತ್ತರಗಳನ್ನು ನನ್ನ ಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ, ದೃಢೀಕರಿಸಿದೆ )

(ಶ್ರೀಮತಿ ಅನುಪಮ ಡಿ.)
ಹಿರಿಯ ಸಿವಿಲ್?ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಗುಬ್ಬಿ